# ಅಧ್ಯಾಯ-I

# ಪರಿಚಯ

# ಅಧ್ಯಾಯ –I

## ಪರಿಚಯ

**1.1.** ಸರ್ಕಾರಿ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಅನುಸರಣಾ ಲೆಕ್ಕಪರಿಶೋಧನೆಯಿಂದ ಹೊರಬಂದ ವಿಷಯಗಳಿಗೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (ಸಿಎಜಿ) ಅವರ ಈ ವರದಿ ಸಂಬಂಧಿಸಿದೆ. ಅನುಸರಣಾ ಲೆಕ್ಕಪರಿಶೋಧನೆಯು ಭಾರತದ ಸಂವಿಧಾನದ ನಿಬಂಧನೆಗಳು, ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು ಮತ್ತು ಸಕ್ಷಮ ಅಧಿಕಾರಿಗಳು ಹೊರಡಿಸಿದ ವಿವಿಧ ಆದೇಶಗಳು ಮತ್ತು ಸೂಚನೆಗಳನ್ನು ಅನುಸರಿಸಲಾಗುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧಕ ಘಟಕಗಳ ವಹಿವಾಟುಗಳ ಪರೀಕ್ಷೆಯನ್ನು ಕುರಿತದ್ದಾಗಿರುತ್ತದೆ.

ಲೆಕ್ಕಪರಿಶೋಧನೆಯ ಪ್ರಮುಖ ಫಲಿತಾಂಶಗಳನ್ನು ರಾಜ್ಯ ಶಾಸಕಾಂಗದ ಗಮನಕ್ಕೆ ತರುವುದು ವರದಿಯ ಪ್ರಾಥಮಿಕ ಉದ್ದೇಶವಾಗಿದೆ. ಲೆಕ್ಕಪರಿಶೋಧನೆಯ ಫಲಿತಾಂಶಗಳು ಕಾರ್ಯನಿರ್ವಾಹಕರನ್ನು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು, ಸೂಕ್ತವಾದ ನೀತಿಗಳನ್ನು ರೂಪಿಸಲು ಮತ್ತು ನಿರ್ದೇಶನಗಳನ್ನು ನೀಡಲು ಅನುವು ಮಾಡಿಕೊಡುತ್ತದೆ. ಇದು ಸಂಸ್ಥೆಗಳ ಸುಧಾರಿತ ಹಣಕಾಸು ನಿರ್ವಹಣೆಗೆ ಕಾರಣವಾಗುತ್ತದೆ ಮತ್ತು ಉತ್ತಮ ಆಡಳಿತಕ್ಕೆ ಕೊಡುಗೆ ನೀಡುತ್ತದೆ.

ಈ ಅಧ್ಯಾಯವು, ಲೆಕ್ಕಪರಿಶೋಧನೆಯ ಯೋಜನೆ ಮತ್ತು ವ್ಯಾಪ್ತಿಯನ್ನು ವಿವರಿಸುವುದರ ಜೊತೆಗೆ, ಹಿಂದಿನ ಲೆಕ್ಕಪರಿಶೋಧನಾ ವರದಿಗಳ ಅನುಸರಣೆಯ ಸಾರಾಂಶವನ್ನು ಒದಗಿಸುತ್ತದೆ. ಈ ವರದಿಯ ಅಧ್ಯಾಯ–II ಸರ್ಕಾರಿ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿನ ಅನುಸರಣಾ ಲೆಕ್ಕಪರಿಶೋಧನೆಯ ಅವಲೋಕನಗಳಿಂದ ಹೊರಬಂದ ಫಲಿತಾಂಶಗಳನ್ನು ಒಳಗೊಂಡಿದೆ.

## ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ರಚನೆ

**1.2** ಗುಂಪುಗಳ ಹಂಚಿಕೆಯ ಆಧಾರದ ಮೇಲೆ ಭಾರತದ ಸಿ&ಎಜಿರವರ ರಾಜ್ಯ ಕಚೇರಿಗಳನ್ನು ಪುನರ್ರಚಿಸಲಾಗಿದೆ (ಮಾರ್ಚ್ 2020). ಪ್ರತಿ ಗುಂಪಿನಲ್ಲಿ ಪರಸ್ಪರ ಸಂಪರ್ಕಿತ ಕಾರ್ಯಸೂಚಿಗಳು ಮತ್ತು ಸಂಪರ್ಕಿತ ಇಲಾಖೆಗಳನ್ನು ಒಳಗೊಂಡಿದೆ. ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II) 21 ಇಲಾಖೆಗಳು ಮತ್ತು 23 ಸ್ವಾಯತ್ತ ಸಂಸ್ಥೆಗಳು (**ಅನುಬಂಧ–1**) ಮಾಡಿದ ವೆಚ್ಚದ ಲೆಕ್ಕಪರಿಶೋಧನೆಗೆ ಜವಾಬ್ದಾರರಾಗಿರುತ್ತಾರೆ. ಪ್ರಧಾನ ಮಹಾಲೆಕ್ಕಪರಿಶೋಧಕರು (ಲೆಕ್ಕಪರಿಶೋಧನೆ–II)ರವರಿಗೆ ಮೂರು ಗುಂಪಿನ ಅಧಿಕಾರಿಗಳು ಮತ್ತು ವಿವಿಧ ಅಧೀನ ಅಧಿಕಾರಿಗಳು ಸಹಾಯ ಮಾಡುತ್ತಾರೆ.

## ಲೆಕ್ಕಪರಿಶೋಧನೆ ನಡೆಸುವ ಅಧಿಕಾರ

**1.3** ಭಾರತದ ಸಂವಿಧಾನದ 149 ಮತ್ತು 151 ನೇ ವಿಧಿಗಳು ಮತ್ತು ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) (ಡಿಪಿಸಿ) ಕಾಯಿದೆ, 1971 ಸಿಎಜಿಯ ಲೆಕ್ಕಪರಿಶೋಧನೆಯ ಆದೇಶವನ್ನು ರೂಪಿಸುತ್ತದೆ. ಸಿಎಜಿಯ (ಡಿಪಿಸಿ) ಕಾಯಿದೆಯ ಪರಿಚ್ಛೇದ 13[1] ರ ಮೂಲಕ ಕರ್ನಾಟಕ ಸರ್ಕಾರದ ಇಲಾಖೆಗಳ ವೆಚ್ಚದ ಲೆಕ್ಕಪರಿಶೋಧನೆ ನಡೆಸಲಾಗುತ್ತದೆ.

---

[1] (i) ರಾಜ್ಯದ ಸಂಚಿತ ನಿಧಿಯ ಎಲ್ಲಾ ವಹಿವಾಟುಗಳು, (ii) ಆಕಸ್ಮಿಕ ನಿಧಿ ಮತ್ತು ಸಾರ್ವಜನಿಕ ಖಾತೆಗಳಿಗೆ ಸಂಬಂಧಿಸಿದ ಎಲ್ಲಾ ವಹಿವಾಟುಗಳು ಮತ್ತು (iii) ಎಲ್ಲಾ ವ್ಯಾಪಾರ, ಉತ್ಪಾದನೆ, ಲಾಭ ಮತ್ತು ನಷ್ಟ ಖಾತೆಗಳು, ಬ್ಯಾಲೆನ್ಸ್ ಶೀಟ್‌ಗಳು ಮತ್ತು ಇತರ ಅಂಗಸಂಸ್ಥೆ ಖಾತೆಗಳು.

ಸಿಎಜಿಯ (ಡಿಪಿಸಿ) ಕಾಯಿದೆಯ ಪರಿಚ್ಛೇದ 19(2)[2], 19(3)[3] ಮತ್ತು 20(1)[4] ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಲಾದ ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಿಎಜಿ ಏಕೈಕ ಲೆಕ್ಕಪರಿಶೋಧಕರಾಗಿದ್ದಾರೆ.

## ಇಲಾಖೆಗಳ ವೆಚ್ಚದ ವಿವರ

**1.4** 2021–22ರ ಅವಧಿಯಲ್ಲಿ ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)ರ ಕಛೇರಿಯ ವ್ಯಾಪ್ತಿಗೆ ಒಳಪಡುವ 21 ರಾಜ್ಯ ಸರ್ಕಾರದ ಇಲಾಖೆಗಳ ವಾಸ್ತವಿಕ ವೆಚ್ಚವನ್ನು ಎರಡು ವರ್ಷಗಳ ಹಿಂದಿನ ಅಂಕಿಅಂಶಗಳೊಂದಿಗೆ ಕೋಷ್ಟಕ ಸಂಖ್ಯೆ.1.1 ರಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ. 1.1: ಇಲಾಖೆವಾರು ವೆಚ್ಚ**

( ₹ ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಇಲಾಖೆ | 2019–20 | 2020–21 | 2021–22 |
|---|---|---|---|---|
| 1 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 1,739.27 | 1,670.23 | 1,860.62 |
| 2 | ಸಾರಿಗೆ | 132.19 | 731.90 | 264.89 |
| 3 | ಲೋಕೋಪಯೋಗಿ ಇಲಾಖೆ | 12,026.31 | 14,601.56 | 13,679.16 |
| 4 | ಮೂಲಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ | 301.43 | 293.90 | 202.80 |
| 5 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ | 306.53 | 404.79 | 329.13 |
| 6 | ಗೃಹ ಇಲಾಖೆ | 6,572.15 | 7,095.46 | 7,768.09 |
| 7 | ವಸತಿ ಇಲಾಖೆ | 3,447.36 | 2,363.47 | 3,528.40 |
| 8 | ನಗರಾಭಿವೃದ್ಧಿ ಇಲಾಖೆ | 8,897.43 | 5,547.20 | 7,732.84 |
| 9 | ಕಾನೂನು ಇಲಾಖೆ | 1,191.24 | 1,231.11 | 1,341.75 |
| 10 | ಕೈಗಾರಿಕೆಗಳು ಮತ್ತು ವಾಣಿಜ್ಯ | 1,447.46 | 2,226.18 | 2,110.24 |
| 11 | ಕೈಮಗ್ಗ ಮತ್ತು ಜವಳಿ ಇಲಾಖೆ | 178.80 | 364.40 | 376.18 |
| 12 | ಗಣಿ ಮತ್ತು ಭೂವಿಜ್ಞಾನ ಇಲಾಖೆ | 79.89 | 68.46 | 65.82 |
| 13 | ಕಬ್ಬು ಅಭಿವೃಧಿ ಹಾಗು ಸಕ್ಕರೆ ನಿರ್ದೇಶನಾಲಯ | 31.53 | 22.66 | 13.08 |
| 14 | ಕಾರ್ಖಾನೆಗಳು ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ | 14.02 | 13.52 | 76.55 |
| 15 | ಪ್ರವಾಸೋದ್ಯಮ | 380.78 | 137.92 | 250.41 |
| 16 | ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ | 19.43 | 19.08 | 23.73 |
| 17 | ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ | 271.64 | 332.43 | 247.12 |
| 18 | ಕನ್ನಡ ಮತ್ತು ಸಂಸ್ಕೃತಿ | 246.79 | 211.03 | 220.05 |
| 19 | ಪತ್ರಾಗಾರ ಇಲಾಖೆಯ | 5.14 | 4.48 | 4.08 |
| 20 | ಇಂಧನ | 13,976.71 | 14,927.04 | 17,794.93 |
| 21 | ವಿದ್ಯುತ್ ಪರಿವೀಕ್ಷಣಾಲಯ ಇಲಾಖೆ | 29.20 | 21.96 | 24.75 |

ಮೂಲ:ವಾರ್ಷಿಕ ಹಣಕಾಸು ತಃಖ್ತೆ ಮತ್ತು ಸಂಬಂಧಿತ ವರ್ಷಗಳ ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗಳು

[2] ಆಯಾ ಶಾಸನಗಳ ನಿಬಂಧನೆಗಳಿಗೆ ಅನುಗುಣವಾಗಿ ಸಂಸತ್ತು ಮಾಡಿದ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿಸಲಾದ ನಿಗಮಗಳ (ಕಂಪನಿಗಳಲ್ಲದಿರುವ) ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

[3] ರಾಜ್ಯಪಾಲರ ಕೋರಿಕೆಯ ಮೇರೆಗೆ ರಾಜ್ಯ ಶಾಸಕಾಂಗವು ಮಾಡಿದ ಕಾನೂನಿನ ಮೂಲಕ ಸ್ಥಾಪಿಸಲಾದ ನಿಗಮಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

[4] ಪರಸ್ಪರ ಒಪ್ಪಿದ ನಿಯಮಗಳು ಮತ್ತು ಷರತ್ತುಗಳ ಮೇಲೆ ರಾಜ್ಯಪಾಲರು ಸಿಎಜಿಗೆ ವಹಿಸಿಕೊಟ್ಟ ಸಂಸ್ಥೆಗಳು/ಪ್ರಾಧಿಕಾರಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

## ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆ

**1.5.** ಲೆಕ್ಕಪರಿಶೋಧನಾ ಯೋಜನಾ ಪ್ರಕ್ರಿಯೆಯು ಸರ್ಕಾರದ ವಿವಿಧ ಇಲಾಖೆಗಳು ಮಾಡಿದ ವೆಚ್ಚ, ಚಟುವಟಿಕೆಗಳ ನಿರ್ಣಾಯಕತೆ/ಸಂಕೀರ್ಣತೆ, ನಿಯೋಜಿತ ಹಣಕಾಸಿನ ಅಧಿಕಾರಗಳ ಮಟ್ಟ, ಒಟ್ಟಾರೆ ಆಂತರಿಕ ನಿಯಂತ್ರಣಗಳ ಮೌಲ್ಯಮಾಪನ ಮತ್ತು ಆಂತರಿಕ ನಿಯಂತ್ರಣಗಳ ಆಧಾರದ ಮೇಲೆ ಎದುರಿಸುವ ಅಪಾಯಗಳ ಮೌಲ್ಯಮಾಪನದೊಂದಿಗೆ ಪ್ರಾರಂಭವಾಗುತ್ತದೆ. ಈ ಸಮಯದಲ್ಲಿ ಹಿಂದಿನ ಲೆಕ್ಕಪರಿಶೋಧನೆ ಸಂಶೋಧನೆಗಳನ್ನು ಸಹ ಪರಿಗಣಿಸಲಾಗುತ್ತದೆ. ಅಪಾಯದ ಮೌಲ್ಯಮಾಪನದ ಆಧಾರದ ಮೇಲೆ ಲೆಕ್ಕಪರಿಶೋಧನೆಯ ಆವರ್ತನ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲಾಗುತ್ತದೆ.

ಕೆಳಗಿನ ಕಾರ್ಯಸೂಚಿ ನಕ್ಷೆಯು ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಡೆಸುವ ವಿಧಾನಗಳನ್ನು ಚಿತ್ರಿಸುತ್ತದೆ:

**ನಕ್ಷೆ ಸಂಖ್ಯೆ 1.1: ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆ**

ಅಪಾಯದ ಮೌಲ್ಯಮಾಪನ ಕೆಲವು ಮಾನದಂಡಗಳ ಆಧಾರದ ಮೇಲೆ ಲೆಕ್ಕಪರಿಶೋಧನೆ ಯೋಜನೆಗಾಗಿ /ಸಂಸ್ಥೆಗಳು/ ಸ್ವಾಯತ್ತ ಸಂಸ್ಥೆಗಳು/ಯೋಜನೆಗಳು ಇತ್ಯಾದಿಗಳು

- ಮಾಡಲಾಗಿರುವ ವೆಚ್ಚ
- ಚಟುವಟಿಕೆಗಳ ವಿಮರ್ಶಾತ್ಮಕತೆ/ಸಂಕೀರ್ಣತೆ
- ನಿಯೋಜಿತ ಹಣಕಾಸಿನ ಅಧಿಕಾರಗಳ ಮಟ್ಟ
- ಆಂತರಿಕ ನಿಯಂತ್ರಣಗಳ ಲೆಕ್ಕಾಚಾರ
- ಪಾಲುದಾರರ ಕಾಳಜಿ

**ಲೆಕ್ಕಪರಿಶೋಧನೆಗಳನ್ನು ಯೋಜಿಸುವುದು** ಘಟಕಗಳ ಆಯ್ಕೆಯನ್ನು ಒಳಗೊಂಡಿದೆ

- ಲೆಕ್ಕಪರಿಶೋಧನೆಯ ಅವಧಿ
- ವ್ಯಾಪ್ತಿ ಮತ್ತು ಲೆಕ್ಕಪರಿಶೋಧನೆಯ ರೀತಿ

**ತಪಾಸಣಾ ವರದಿ** ಅವಲಂಬಿಸಿರುವುದು

- ದಾಖಲೆಗಳ ತಪಾಸಣೆ
- ಲೆಕ್ಕಪರಿಶೋಧನೆಯ ವಿಚಾರಣೆಗಳಿಗೆ ಒದಗಿಸಲಾದ ತ್ಯುತ್ತರಗಳು/ಮಾಹಿತಿಗಳು.

**ಲೆಕ್ಕಪರಿಶೋಧನಾ ವರದಿ** ರಾಜ್ಯಪಾಲರ ಮೂಲಕ ಶಾಸಕಾಂಗಕ್ಕೆ ಸಲ್ಲಿಕೆಗಾಗಿ

- ತಪಾಸಣೆ ವರದಿಗಳಿಂದ ಪ್ರಮುಖ ಲೆಕ್ಕಪರಿಶೋಧನಾ ಕಂಡಿಕೆಗಳ ಅವಲೋಕನಗಳು.

ಪ್ರತಿ ಘಟಕದ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಿದ ನಂತರ, ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿರುವ ತಪಾಸಣೆ ವರದಿಗಳನ್ನು ಇಲಾಖೆಗಳ ಮುಖ್ಯಸ್ಥರಿಗೆ ನೀಡಲಾಗುತ್ತದೆ. ತಪಾಸಣಾ ವರದಿಗಳನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಲೆಕ್ಕಪರಿಶೋಧನೆಯ

ಫಲಿತಾಂಶಗಳಿಗೆ ಪ್ರತ್ಯುತ್ತರಗಳನ್ನು ಒದಗಿಸುವಂತೆ ಇಲಾಖೆಗಳನ್ನು ವಿನಂತಿಸಲಾಗುತ್ತದೆ. ಪ್ರತ್ಯುತ್ತರಗಳನ್ನು ಸ್ವೀಕರಿಸಿದಾಗಲೆಲ್ಲಾ, ಲೆಕ್ಕಪರಿಶೋಧನೆಯ ಸಂಶೋಧನೆಗಳನ್ನು ಇತ್ಯರ್ಥಗೊಳಿಸಲಾಗುತ್ತದೆ ಅಥವಾ ಅನುಸರಣೆಗಾಗಿ ಮುಂದಿನ ಕ್ರಮವನ್ನು ಸೂಚಿಸಲಾಗುತ್ತದೆ. ಈ ತಪಾಸಣಾ ವರದಿಗಳಲ್ಲಿನ ಪ್ರಮುಖ ಲೆಕ್ಕಪರಿಶೋಧನೆ ಅವಲೋಕನಗಳನ್ನು ಲೆಕ್ಕಪರಿಶೋಧನೆಯ ವರದಿಗಳಲ್ಲಿ ಸೇರಿಸಲು ಪ್ರಕ್ರಿಯೆಗೊಳಿಸಲಾಗುತ್ತದೆ, ಇದನ್ನು ರಾಜ್ಯ ಶಾಸಕಾಂಗದಲ್ಲಿ ಮಂಡಿಸಲು ಭಾರತದ ಸಂವಿಧಾನದ 151 ನೇ ವಿಧಿಯ ಅಡಿಯಲ್ಲಿ ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸಲಾಗುತ್ತದೆ.

## ಗಮನಾರ್ಹವಾದ ಲೆಕ್ಕಪರಿಶೋಧನೆ ಅವಲೋಕನಗಳು ಮತ್ತು ಲೆಕ್ಕಪರಿಶೋಧನೆಗೆ ಪ್ರತಿಕ್ರಿಯೆ

**1.6** ಲೆಕ್ಕಪರಿಶೋಧನೆಯು ಅನುಸರಣೆ ಲೆಕ್ಕಪರಿಶೋಧನೆಯ ಸಮಯದಲ್ಲಿ ಗಮನಿಸಲಾದ ವಹಿವಾಟುಗಳು ಮತ್ತು ಆಂತರಿಕ ನಿಯಂತ್ರಣಗಳಲ್ಲಿನ ಗಮನಾರ್ಹ ನ್ಯೂನತೆಗಳನ್ನು ಇಲಾಖೆಗಳ ಮುಖ್ಯಸ್ಥರಿಗೆ ವರದಿ ಮಾಡಲಾಗಿದೆ. ಈ ವರದಿಯ ಭಾಗ I ರಲ್ಲಿ ಒಳಗೊಂಡಿರುವ ಕಂಡಿಕೆಗಳನ್ನು ಸಂಬಂಧಿಸಿದ ಇಲಾಖೆಗಳು ಒಂದು ತಿಂಗಳೊಳಗೆ ತಮ್ಮ ಪ್ರತಿಕ್ರಿಯೆಗಳನ್ನು ಕಳುಹಿಸಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಇವರಿಗೆ ಅಕ್ಟೋಬರ್ 2022 ಮತ್ತು ಏಪ್ರಿಲ್ 2023 ರ ನಡುವೆ ಅರೆಸರ್ಕಾರಿ ಪತ್ರಗಳನ್ನು ರವಾನಿಸಲಾಗಿದೆ. ಸರ್ಕಾರವು ಒದಗಿಸಿದ ಉತ್ತರಗಳನ್ನು ಸೂಕ್ತವಾಗಿ ಅಳವಡಿಸಲಾಗಿದೆ ಮತ್ತು ಪರಿಷ್ಕೃತ ಕರಡು ವರದಿಯನ್ನು 29 ಜನವರಿ 2024 ರಂದು ಹೆಚ್ಚಿನ ಉತ್ತರಗಳಿಗಾಗಿ ಸರ್ಕಾರಕ್ಕೆ ನೀಡಲಾಯಿತು. ಆದರೆ, ಸರ್ಕಾರದಿಂದ ಯಾವುದೇ ಉತ್ತರ ಬಂದಿಲ್ಲ.

ಎಂಟು ಅನುಸರಣೆ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಪ್ರತ್ಯುತ್ತರಗಳನ್ನು ಸ್ವೀಕರಿಸಲಾಗಿದೆ ಮತ್ತು ಉಳಿದ ಮೂರು ಕಂಡಿಕೆಗಳಿಗೆ ಉತ್ತರಗಳನ್ನು ಸರ್ಕಾರದಿಂದ ಸ್ವೀಕರಿಸಲಾಗಿರುವುದಿಲ್ಲ (ಏಪ್ರಿಲ್ 2023). ಸ್ವೀಕರಿಸಲ್ಪಟ್ಟ ಸರ್ಕಾರದ ಅಭಿಪ್ರಾಯಗಳನ್ನು ಸೂಕ್ತವಾಗಿ ಅಳವಡಿಸಲಾಗಿದೆ.

## ಲೆಕ್ಕಪರಿಶೋಧನೆಗೆ ಸರ್ಕಾರದ ಜವಾಬ್ದಾರಿ

***ಬಾಕಿಯಿರುವ ತಪಾಸಣೆ ವರದಿಗಳು***

**1.7.1.** 2001 ರಲ್ಲಿ ಹಣಕಾಸು ಇಲಾಖೆ ನೀಡಿದ ಲೆಕ್ಕಪರಿಶೋಧನಾ ಅವಲೋಕನಗಳ ತ್ವರಿತ ಇತ್ಯರ್ಥಕ್ಕಾಗಿ ಸೂಚನೆಗಳ ಕೈಪಿಡಿಯು, ನಿಗದಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ತಪಾಸಣೆಯ ಸಮಯದಲ್ಲಿ ಗಮನಿಸಲಾಗಿದ ನ್ಯೂನತೆಗಳು, ಲೋಪಗಳು ಇತ್ಯಾದಿಗಳಿಗೆ ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಮಹಾಲೆಕ್ಕಪರಿಶೋಧಕರು ನೀಡಿದ ತಪಾಸಣಾ ವರದಿಗಳಿಗೆ ಕಾರ್ಯನಿರ್ವಾಹಕರಿಂದ ತ್ವರಿತ ಪ್ರತಿಕ್ರಿಯೆಯನ್ನು ಒದಗಿಸುವಂತೆ ನಿಗದಿಪಡಿಸಿದೆ. ಕಛೇರಿಗಳ ಮುಖ್ಯಸ್ಥರು ಮತ್ತು ಮುಂದಿನ ಉನ್ನತ ಅಧಿಕಾರಿಗಳು ತಪಾಸಣಾ ವರದಿಗಳಲ್ಲಿ ಒಳಗೊಂಡಿರುವ ಅವಲೋಕನಗಳನ್ನು ಅನುಸರಿಸಬೇಕು, ದೋಷಗಳು ಮತ್ತು ಲೋಪಗಳನ್ನು ತ್ವರಿತವಾಗಿ ಸರಿಪಡಿಸಬೇಕು ಮತ್ತು ಮಹಾಲೆಕ್ಕಪರಿಶೋಧಕರಿಗೆ ತಮ್ಮ ಅನುಸರಣೆಯನ್ನು ವರದಿ ಮಾಡಬೇಕಾಗುತ್ತದೆ, ಅವರು ಬಾಕಿ ಇರುವ ತಪಾಸಣಾ ವರದಿಗಳ ಅರ್ಧ ವಾರ್ಷಿಕ ವರದಿಯನ್ನು ಲೆಕ್ಕಪರಿಶೋಧನಾ ಅವಲೋಕನಗಳ ಮೇಲ್ವಿಚಾರಣೆಯನ್ನು ಸುಗಮಗೊಳಿಸಲು ಇಲಾಖೆಯ ಕಾರ್ಯದರ್ಶಿಗೆ ರವಾನಿಸುತ್ತಾರೆ.

31ನೇ ಮಾರ್ಚ್ 2022ರಂತೆ, 16 ಇಲಾಖೆಗಳ ಪ್ರತಿಯಾಗಿ 2,457 ತಪಾಸಣಾ ವರದಿಗಳು (13,115 ಕಂಡಿಕೆಗಳು) ಬಾಕಿ ಉಳಿದಿವೆ. ಬಾಕಿ ಇರುವ ಕಂಡಿಕೆಗಳ ವಯೋಮಾನವಾರು ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 1.2: ವಯೋಮಾನವಾರು ಬಾಕಿಯಿರುವ ತಪಾಸಣಾ ವರದಿಗಳು ಮತ್ತು ಕಂಡಿಕೆಗಳು**

| ಕ್ರಮ ಸಂಖ್ಯೆ | ವಯೋಮಾನ | ತಪಾಸಣಾ ವರದಿಗಳು ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
|---|---|---|---|
| 1 | < 1 ವರ್ಷಕ್ಕಿಂತ ಕಡಿಮೆ | 129 | 1,379 |
| 2 | 1ರಿಂದ 2 ವರ್ಷಗಳು | 206 | 1,878 |
| 3 | 2ರಿಂದ 5 ವರ್ಷಗಳು | 668 | 4,773 |
| 4 | 5ರಿಂದ 10 ವರ್ಷಗಳು | 920 | 3,878 |
| 5 | 10 ವರ್ಷಗಳಿಗೂ ಅಧಿಕ | 528 | 1,207 |
| ಒಟ್ಟು | | **2,451** | **13,115** |

ಮಾರ್ಚ್ 2022ರವರೆಗೆ ನೀಡಲಾದ ಬಾಕಿ ಉಳಿದಿರುವ ತಪಾಸಣಾ ವರದಿಗಳ ಪರಿಶೀಲನೆಯು 129 ತಪಾಸಣಾ ವರದಿಗಳು (1,379 ಕಂಡಿಕೆಗಳು) ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಬಾಕಿ ಉಳಿದಿವೆ ಎಂದು ತೋರಿಸಿದೆ, ಒಂದು ವರ್ಷಕ್ಕಿಂತ ಹೆಚ್ಚು ಆದರೆ 10 ವರ್ಷಗಳಿಗಿಂತ ಕಡಿಮೆ ಇರುವ 1,794 ತಪಾಸಣಾ ವರದಿಗಳು (10,529 ಕಂಡಿಕೆಗಳು) ಮತ್ತು 10 ವರ್ಷಗಳಿಗೂ ಅಧಿಕ ಇರುವ 528 ತಪಾಸಣಾ ವರದಿಗಳು (1,207 ಕಂಡಿಕೆಗಳು) ಬಾಕಿ ಉಳಿದಿವೆ. ವರ್ಷವಾರು ಮತ್ತು ಇಲಾಖಾವಾರು ತಪಾಸಣಾ ವರದಿಗಳ ವಿವರಗಳು ಮತ್ತು ಬಾಕಿ ಉಳಿದಿರುವ ಕಂಡಿಕೆಗಳನ್ನು **ಅನುಬಂಧ–2** ರಲ್ಲಿ ವಿವರಿಸಲಾಗಿದೆ.

***ಲೆಕ್ಕಪರಿಶೋಧನಾ* ವರದಿಗಳ ಮೇಲೆ ಅನುಸರಣಾ ಕ್ರಮ**

**1.7.2.** ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕೈಪಿಡಿ ಮತ್ತು ಕಾರ್ಯವಿಧಾನದ ನಿಯಮಗಳು (ಆಂತರಿಕ ಕಾರ್ಯನಿರ್ವಹಣೆ), 1999, ಸರ್ಕಾರದ ಎಲ್ಲಾ ಇಲಾಖೆಗಳು ಲೆಕ್ಕಪರಿಶೋಧನಾ ವರದಿಗಳಲ್ಲಿ ಒಳಗೊಂಡಿರುವ ಲೆಕ್ಕಪರಿಶೋಧನೆ ಅವಲೋಕನಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳ (ಎಟಿಎನ್) ರೂಪದಲ್ಲಿ ವಿವರವಾದ ವಿವರಣೆಯನ್ನು ಶಾಸಕಾಂಗ ಸಭೆಯಲ್ಲಿ ವರದಿಯನ್ನು ಮಂಡಿಸಿದ ನಾಲ್ಕು ತಿಂಗಳುಗಳ ಒಳಗಾಗಿ ಒದಗಿಸುವಂತೆ ನಿರ್ದೇಶಿಸುತ್ತದೆ.

ಆಡಳಿತಾತ್ಮಕ ಇಲಾಖೆಗಳು ಈ ಸೂಚನೆಗಳನ್ನು ಅನುಸರಿಸಲಿಲ್ಲ ಮತ್ತು ಒಂಬತ್ತು ಇಲಾಖೆಗಳು (**ಅನುಬಂಧ–3** ರಲ್ಲಿ ವಿವರಿಸಿದಂತೆ) 31 ಮಾರ್ಚ್ 2023ರಂತೆ 2003–04 ರಿಂದ 2020–21ರ ಅವಧಿಯ 96 ಕಂಡಿಕೆಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳನ್ನು ಸಲ್ಲಿಸಿಲ್ಲ.

**ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಚರ್ಚಿಸಬೇಕಾದ *ಕಂಡಿಕೆ*ಗಳು**

**1.7.3.** 31 ಮಾರ್ಚ್ 2023ರಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಗೆ ಬಾಕಿ ಇರುವ ಕಂಡಿಕೆಗಳ ಅಂಕಿಅಂಶಗಳ ಅವಲೋಕನವು 136 ಕಂಡಿಕೆಗಳು (ಕಾರ್ಯನಿರ್ವಹಣೆಯ ಲೆಕ್ಕಪರಿಶೋಧನೆಗಳು ಮತ್ತು ವಿಮರ್ಶೆಗಳನ್ನು ಒಳಗೊಂಡಂತೆ) ಇನ್ನೂ ಚರ್ಚಿಸಬೇಕಾಗಿದೆ ಎಂದು ತೋರಿಸಿದೆ. 31 ಮಾರ್ಚ್ 2023ರಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಬಾಕಿ ಉಳಿದಿರುವ ಕಂಡಿಕೆಗಳ (ಸಾಮಾನ್ಯ ಮತ್ತು ಅಂಕಿಅಂಶಗಳನ್ನು ಹೊರತುಪಡಿಸಿ) ವಿಭಾಗವಾರು ವಿವರಗಳನ್ನು **ಅನುಬಂಧ–4** ರಲ್ಲಿ ವಿವರಿಸಲಾಗಿದೆ.

**ರಾಜ್ಯ ಶಾಸಕಾಂಗದಲ್ಲಿ ಸ್ವಾಯತ್ತ ಸಂಸ್ಥೆಗಳ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ**

**1.8** ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II) ರವರ ಅಧಿಕಾರ ವ್ಯಾಪ್ತಿಯಲ್ಲಿರುವ ರಾಜ್ಯದಲ್ಲಿ 13 ಸ್ವಾಯತ್ತ ಸಂಸ್ಥೆಗಳ ಖಾತೆಗಳ ಲೆಕ್ಕಪರಿಶೋಧನೆಯನ್ನು ಸಿಎಜಿಗೆ ವಹಿಸಲಾಗಿದೆ.

ಲೆಕ್ಕಪರಿಶೋಧನೆಯ ಜವಾಬ್ದಾರಿ, ಲೆಕ್ಕಪರಿಶೋಧನೆಗೆ ಲೆಕ್ಕಪತ್ರಗಳನ್ನು ಸಲ್ಲಿಸುವುದು, ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ (ಎಸ್‌ಎಆರ್‌ಗಳು) ವಿತರಣೆ ಮತ್ತು ಶಾಸಕಾಂಗದಲ್ಲಿ ಅದರ ಮಂಡನೆಯ ಸ್ಥಿತಿಯನ್ನು **ಅನುಬಂಧ–5** ರಲ್ಲಿ ನೀಡಲಾಗಿದೆ.

ಜೂನ್ 2022ರಂತೆ ಸ್ವಾಯತ್ತ ಸಂಸ್ಥೆಗಳಿಂದ ವಾರ್ಷಿಕ ಲೆಕ್ಕಪತ್ರಗಳ ಸಲ್ಲಿಕೆಯಲ್ಲಿನ ವಿಳಂಬವು ಐದರಿಂದ 24 ತಿಂಗಳುಗಳವರೆಗೆ ಇರುತ್ತದೆ. ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆಯ ವಿಳಂಬವು ಹಣಕಾಸಿನ ಅಕ್ರಮಗಳು ಪತ್ತೆಯಾಗದೆ ಹೋಗುವ ಅಪಾಯವನ್ನು ಹೊಂದಿರುತ್ತದೆ. ಆದ್ದರಿಂದ, ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ, ಶೀಘ್ರವಾಗಿ ಲೆಕ್ಕಪರಿಶೋಧನೆಗೆ ಸಲ್ಲಿಸಬೇಕಾಗಿರುತ್ತದೆ.